# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1244
ಸದಸ್ಯರ ಹೆಸರು : ಶ್ರೀ ಎಂ.ಜಿ. ಮುಳೆ
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 21.08.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಭಾಲ್ಕಿ ತಾಲೂಕಿನ ಜೀರಗಿಹಾಳ್ ಗ್ರಾಮದಲ್ಲಿ 2002ನೇ ಸಾಲಿನಲ್ಲಿ ನಿರ್ಮಿಸಲಾಗಿರುವ ಬ್ಯಾರೇಜ್ ಕಾಮಗಾರಿ ಈವರಿಗೆ ಶೇಕಡ ಎಷ್ಟು ಕಾಮಗಾರಿ ಪೂರ್ಣಗೊಂಡಿದೆ; ಮತ್ತು ಎಷ್ಟು ಶೇಕಡ ಕಾಮಗಾರಿ ಬಾಕಿ ಇದೆ; ಕಾಮಗಾರಿ ವಿಳಂಬವಾಗಲು ಕಾರಣವೇನು; | ಜೀರಗ್ಯಾಳ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಟೆಂಡರ್ ಆಧಾರದ ಮೇಲೆ ದಿನಾಂಕ:06.06.2006ರಲ್ಲಿ ಗುತ್ತಿಗೆ ವಹಿಸಲಾಗಿದ್ದು, ದಿನಾಂಕ:20.12.2012ರಂದು ಪೂರ್ಣಗೊಳಿಸಲಾಗಿದೆ. ಸದರಿ ಕಾಮಗಾರಿಗೆ ರೂ.57.02 ಕೋಟಿ ವೆಚ್ಚವಾಗಿದ್ದು, ಯಾವುದೇ ಹಣ ಬಿಡುಗಡೆ ಮಾಡುವ ಪ್ರಸ್ತಾವನೆ ಇರುವುದಿಲ್ಲ. |
| ಆ) | ಈ ಯೋಜನೆಯು ಎಷ್ಟು ಮೊತ್ತದ ಅಂದಾಜಿನ ಯೋಜನೆಯಾಗಿದ್ದು ಇದುವರೆಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ; ಇದರಲ್ಲಿ ಎಷ್ಟು ಮೊತ್ತ, ಖರ್ಚಾಗಿದೆ ಹಾಗೂ ಉಳಿದ ಹಣ ಬಿಡುಗಡೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ; | |
| ಇ) | ಈ ಯೋಜನೆಯ ಸಲುವಾಗಿ ರೈತರ ಎಷ್ಟು ಎಕರೆ ಭೂಮಿಯನ್ನು ಬಳಸಿಕೊಳ್ಳಲಾಗಿದೆ; ಎಷ್ಟು ಪರಿಹಾರ ಹಣವನ್ನು ನೀಡಲಾಗಿದೆ; ಇನ್ನು ಎಷ್ಟು ರೈತರಿಗೆ ಪರಿಹಾರ ಹಣ ನೀಡಬೇಕಿದೆ; ಸರಿಯಾದ ಮೌಲ್ಯಮಾಪನದ ಮೇಲೆ ಪರಿಹಾರ ನೀಡಲಾಗಿದೆಯೇ; (ಸಂಪೂರ್ಣ ವಿವರ ಒದಗಿಸುವುದು) | ಜೀರಗ್ಯಾಳ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕಾಗಿ ಭಾಲ್ಕಿ ತಾಲೂಕಿನ ಜೀರಗ್ಯಾಳ ಹಾಗೂ ಸಾಯಗಾಂವ ಗ್ರಾಮಗಳ ಒಟ್ಟು 18 ಎಕರೆ 21 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಜೆನರಲ್ ಮ್ಯಾನೇಜರ್, ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ, ಕೃ.ಮೇ.ಯೋ., ನವನಗರ, ಬಾಗಲಕೋಟೆ ರವರು ಭೂಸ್ವಾಧೀನ ಅವಧಿಯಲ್ಲಿ, ಅಂದಿನ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಮೌಲ್ಯಮಾಪನ ಮಾಡಿ, ಒಟ್ಟು ರೂ.10,19,566.00 ಪರಿಹಾರ ಮೊತ್ತವನ್ನು ರೈತರಿಗೆ ಪಾವತಿಸಲಾಗಿರುತ್ತದೆ. |
| ಈ) | ಈ ಬ್ಯಾರೇಜ್ ನಲ್ಲಿ ಸ್ಥಾಪಿಸಲಾದ ಬಾಗಿಲುಗಳು ಸಂಪೂರ್ಣ ಕಾರ್ಯನಿರ್ವಹಿಸುತ್ತಿದೆಯೇ ಈ ಬ್ಯಾರೇಜ್‌ನಿಂದ ಹಿನ್ನೀರು ನಿಲ್ಲುವಲ್ಲಿ ಸಹಾಯವಾಗುತ್ತಿರುವುದೆಂದು ಸರ್ಕಾರ ದೃಢಪಡಿಸಿದೆಯೇ ಈ ಮೂಲಕ ಸಿಂಚನಕ್ಕೆ ನಿರ್ವಹಣಾ ನದಿ ಜಲ ಲಭ್ಯವಿದೆಯೇ; | ಸದರಿ ಬ್ಯಾರೇಜ್‌ನಲ್ಲಿ ಅಳವಡಿಸಲಾದ ಸ್ವಯಂಚಾಲಿತ ಗೋಡಬೋಲೆ ಗೇಟುಗಳಿಂದ ನೀರು ಸೋರಿಕೆಯಾಗುತ್ತಿದ್ದು, ನಿಗದಿತ ನೀರಿನ ಸಂಗ್ರಹಣಾ ಸಾಮರ್ಥ್ಯ 0.128 ಟಿ.ಎಂ.ಸಿ ವರೆಗೂ ಶೇಖರಿಸಲು ಸಾಧ್ಯವಾಗಿರುವುದಿಲ್ಲ. |
| ಉ) | ಈ ಯೋಜನೆಯಿಂದ ಎಷ್ಟು ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ; ಪ್ರಸ್ತುತ ಎಷ್ಟು ಪ್ರದೇಶಕ್ಕೆ ಸಿಂಚನ ಸಾಧ್ಯವಾಗುತ್ತಿದೆ ಈ ಯೋಜನೆಯಿಂದ ಎಷ್ಟು ರೈತರಿಗೆ ನೇರ ಲಾಭವಾಗುತ್ತಿದೆ; (ಮಾಹಿತಿಯನ್ನು ಒದಗಿಸುವುದು) | ಸದರಿ ಯೋಜನೆಯು ಬ್ಯಾರೇಜಿನಲ್ಲಿ ಸಂಗ್ರಹವಾಗುವ ಹಿನ್ನೀರನ್ನು ರೈತರು ತಮ್ಮ ಸ್ವಂತ ಪಂಪ್ ಸೆಟ್ ಅಳವಡಿಸಿಕೊಂಡು, ನೀರಾವರಿ ಬಳಸಿಕೊಳ್ಳುವ ಯೋಜನೆಯಾಗಿದ್ದು, ಪ್ರಸ್ತುತ, ರೈತರು ಸುಮಾರು 400 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಂಡಿರುತ್ತಾರೆ. |
| ಊ) | ಈ ಬ್ಯಾರೇಜ್ ಕಾಮಗಾರಿ ಗುಣಮಟ್ಟವನ್ನು ಪರಿಶೀಲಿಸಲು ಸರ್ಕಾರ ಯಾವುದೇ ತಾಂತ್ರಿಕ ತಂಡ ಅಥವಾ ಸಂಸ್ಥೆಯಿಂದ ಮೌಲ್ಯಮಾಪನ ವರದಿ ಪಡೆದಿದೆಯೇ ಅದರಲ್ಲಿ ಸೂಚಿಸಿರುವ ದೋಷಗಳು ಯಾವುವು; (ಸಂಪೂರ್ಣ ವಿವರ ಒದಗಿಸುವುದು) | ಬ್ಯಾರೇಜಿನ ನಿರ್ಮಾಣ ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿದ್ದು, ಕಾಮಗಾರಿಯ ನಿರ್ಮಾಣ ಹಂತದಲ್ಲಿಯೇ ಗುಣಮಟ್ಟವನ್ನು ಪರಿಶೀಲಿಸಲಾಗಿರುತ್ತದೆ. ಪ್ರಸ್ತುತ, ಬ್ಯಾರೇಜ್‌ನ ಗೋಡಬೋಲೆ ಗೇಟುಗಳ ಕೆಳಗೆ ನೀರು ಸೋರಿಕೆಯಾಗುತ್ತಿದ್ದು, ಬ್ಯಾರೇಜಿನ ಪೂರ್ಣ ಸಾಮರ್ಥ್ಯದಷ್ಟು ನೀರು ಶೇಖರಿಸಲು ಸಾಧ್ಯವಾಗುತ್ತಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಋ) | ಭಾಲ್ಕಿ ತಾಲೂಕಿನ ಜೀರಗಿಹಾಳ್ ಬ್ಯಾರೇಜ್‌ನಲ್ಲಿ ನೂತನವಾಗಿ ಸ್ಥಾಪಿಸಲಾಗುತ್ತಿರುವ ಬ್ಯಾರೇಜ್ ಬಾಗಿಲುಗಳ ಗೇಟ್ಸ್ ಸ್ಥಾಪನೆಯ ಕುರಿತು ಪ್ರಸ್ತಾವನೆಯೂ ಸರ್ಕಾರದ ಮುಂದಿದೆಯೇ: ಇದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ: | ಆದ್ದರಿಂದ, ಸದರಿ ನ್ಯೂನತೆಯನ್ನು ಪರಿಶೀಲಿಸಲು ನಿಗಮದ ತಾಂತ್ರಿಕ ಸಲಹೆಗಾರರ ತಂಡವನ್ನು ರಚಿಸಿ ಪರಿವೀಕ್ಷಣೆ ಕೈಗೊಳ್ಳಲಾಗಿದ್ದು, ಅದರಂತೆ, River Gorge ಭಾಗದಲ್ಲಿರುವ 20 ಗೋಡಬೋಲೆ ಗೇಟುಗಳನ್ನು ತೆಗೆದು vertical lift gates with mechanical hoisting ಅನ್ನು ಅಳವಡಿಸಲು ಉದ್ದೇಶಿಸಲಾಗಿದೆ.<br>ಅಲ್ಲದೇ, ಸದರಿ ಪ್ರಸ್ತಾವನೆಯು ಸೇರಿದಂತೆ ಬೀದರ್ ಜಿಲ್ಲೆಯಲ್ಲಿ ಮಾಂಜ್ರ ನದಿಗೆ ಅಡ್ಡಲಾಗಿ ಮಾಣಿಕೇಶ್ವರ, ಚಂದಾಪುರ, ಹಾಲಹಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳ ಪುನ:ಶ್ಚೇತನದ ರೂ.151.70 ಕೋಟಿ ಮೊತ್ತದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಋೂ) | ಈ ಬಾಗಿಲುಗಳಿಗಾಗಿ ತಾಂತ್ರಿಕ ದೃಷ್ಟಿಯಿಂದ ಯಾವ ರೀತಿಯ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ; ಈ ನೂತನ ಬಾಗಿಲುಗಳ ಸ್ಥಾಪನೆಗಾಗಿ ಸರ್ಕಾರ ಎಷ್ಟು ಮೊತ್ತದ ಅಂದಾಜು ವೆಚ್ಚ ನಿಗದಿಪಡಿಸಿದೆ: ಇದುವರೆಗೆ ಎಷ್ಟು ಹಣವನ್ನು ಬಳಸಿಕೊಳ್ಳಲಾಗಿದೆ? (ಮಾಹಿತಿ ಒದಗಿಸುವುದು) | |

**ಸಂಖ್ಯೆ:ಜಸಂಇ 115 ಎಂಎಲ್ಎ 2025**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ.